Speed Post

Cw 31588
6/9/13.

ಕರ್ನಾಟಕ ಸರ್ಕಾರ

GOVERNMENT OF KARNATAKA

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ / Telephone: 0831-2407201, 0831-2407209

ಫ್ಯಾಕ್ಸ / Fax: 0831-2429662

e-mail: ceo_zp_bgm@nic.in, pddrdabgm@gmail.com


ನಂ. ಜಿಪಂ.ರಾಗ್ರಾಉ.ವಿವ. /2013-14 ಬೆಳಗಾವಿ ದಿನಾಂಕ 30-8-2013

ರಿಗೆ:

ನಿರ್ದೇಶಕರು

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ,

2,ನೇಮಹಡಿ, 3ನೇ ಹಂತ,ಬಹು ಮಹಡಿ ಕಟ್ಟಡ, ಡಾ:ಅಂಬೇಡಕರ ವೀದಿ,

ಬೆಂಗಳೂರು-01

Director MG. NREGA, RD & PR DEPT.

ಮಾನ್ಯರೇ,

ವಿಷಯ: ಸನ್ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಮಾಡಿದ ಘೋಷಣೆಯಂತೆ ಕೆಳಕಂಡ 5 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಿಶೇಷ ಗ್ರಾಮ ಸಭೆ ನಡೆಸಿ ಕಾಮಗಾರಿ /ಫಲಾನುಭವಿ ಆಯ್ಕೆ ಮಾಡುವ ಕುರಿತು.

ಉಲ್ಲೇಖ: ದಿನಾಂಕ: 27-8-2013 ರಂದು ನಡೆಸಲಾದ ಪತ್ರಿಕಾ ಗೋಷ್ಠಿ.

ಮೇಲ್ಕಂಡ ವಿಷಯಕ್ಕೆ ಸಂಭಂಧಿಸಿದಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಮಾಡಿದ ಘೋಷಣೆಯಂತೆ ಕೆಳಕಂಡ 5 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಿಶೇಷ ಗ್ರಾಮ ಸಭೆ ನಡೆಸಿ ಕಾಮಗಾರಿ /ಫಲಾನುಭವಿ ಆಯ್ಕೆ ಮಾಡುವ ಕುರಿತು ಈ ಕೆಳಗಿನ ವಿಷಯಗಳ ಕುರಿತು ದಿನಾಂಕ: 27-8-2013 ಪತ್ರಿಕಾ ಗೋಷ್ಠಿಯನ್ನು ಜಿಲ್ಲಾ ಪಂಚಾಯತದಲ್ಲಿ ಜರುಗಿಸಲಾಯಿತು. ಸದರಿ ವಿಷಯವನ್ನು ಎಲ್ಲ ದಿನಪತ್ರಿಕೆಗಳಲ್ಲಿ ಪ್ರಚಾರಪಡಿಸಿ ಯೋಜನೆಗಳ ಬಗ್ಗೆ ಎಲ್ಲ ಗ್ರಾಮೀಣ ಪ್ರದೇಶದ ಜನರಿಗೆ ಅರಿವು ಮೂಡಿಸಲು ಹಾಗೂ ಯೋಜನೆಗಳ ಲಾಭಪಡೆಯಲು ಅನುಕೂಲವಾಗುವಂತೆ ಪತ್ರಿಕಾ ಮಾದ್ಯಮದರ ಮೂಲಕ ಜನಸಾಮಾನ್ಯರಿಗೆ ತಿಳಿವಳಿಕೆ ನೀಡಲು ತಿಳಿಸಲಾಯಿತು.

1. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಡಿ ಎಸ್.ಸಿ/ ಎಸ್.ಟಿ, ಸಣ್ಣ ಮತ್ತು ಅತೀ ಸಣ್ಣ ರೈತರ & ಇತರ ಅರ್ಹ ವೈಯಕ್ತಿಕ ಫಲಾನುಭವಿಗಳ ಜಮೀನುಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು
2. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2013-14 ನೇ ಸಾಲಿನಲ್ಲಿ " ನಮ್ಮ ಹೊಲ ನಮ್ಮ ದಾರಿ" ಕಾರ್ಯಕ್ರಮವನ್ನು ಗ್ರಾಮೀಣ ಸರ್ವಋತು ಸಂಪರ್ಕ ಪ್ರವರ್ಗದ ಕಾಮಗಾರಿ ಕೈಗೆತ್ತಿಕೊಳ್ಳುವದು:
3. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಡಿ ಜಿಲ್ಲಾ ಪಂಚಾಯತ ವ್ಯಾಪ್ತಿಯಡಿ ಬರುವ ಕೆರೆಗಳನ್ನು ಪುನ:ಶ್ಚೇತನಗೊಳಿಸುವದು.
4. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗಖಾತರಿ ಯೋಜನೆಯಡಿ 2013-14ನೇ ಸಾಲಿಗೆ ಗ್ರಾಮಗಳಲ್ಲಿ ಕೃಷಿ ಚಟುವಟಿಕೆಗಳಿಗಾಗಿ ಒಕ್ಕಣೆ ಕಣವನ್ನು ನಿರ್ಮಿಸುವುದು.

Sri. Sanjeev Kumar

5. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬಿಹಾರ್ ರಾಜ್ಯದ ಮುಜಾಫರ್ ಪುರ್ ಜಿಲ್ಲೆಯ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲೂ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಡುವುದರ ಬಗ್ಗೆ.

ಇದು ಅಲ್ಲದೇ ನಿರ್ಮಲ ಭಾರತ ಅಭಿಯಾನದಡಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಪ್ರತಿ ಫಲಾನುಭವಿಗೆ ರೂ.4700/- ಗಳ ಪ್ರೋತ್ಸಾಹ ಧನದ ಅವಕಾಶವಿರುತ್ತದೆ. ಈ ರೂ.4700/- ರಲ್ಲಿ ರೂ.3200/- ಕೇಂದ್ರ ಸರ್ಕಾರದ ಪಾಲು ಹಾಗೂ ರೂ.1500/- ರಾಜ್ಯ ಸರ್ಕಾರದ ಕೊಡುಗೆ ಇರುವುದು. ಫಲಾನುಭವಿಯ ವಂತಿಕೆಯು ರೂ.800/- ಇರುತ್ತದೆ. ಇದರೊಂದಿಗೆ ಮಹಾತ್ಮಾ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ.4500/- ಗಳ ಅವಕಾಶ ಕೂಡ ಇರುತ್ತದೆ.ಹೀಗೆ ಒಟ್ಟು ರೂ.9200/- ಗಳನ್ನು ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳು ಪಡೆದುಕೊಳ್ಳಲು ಅವಕಾಶವಿದೆ ಅಂತಾ ವಿವರಗಳನ್ನು ತಿಳಿಸಲಾಯಿತು.

ಸದರಿ ವಿಷಯಗಳು ದಿನಾಂಕ: 28-8-2013 ರಂದು ವಿವಿಧ ದಿನಪತ್ರಿಕೆಗಳಲ್ಲಿ ಪ್ರಚಾರಪಡಿಸಿದ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟವಾದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾನ್ಯರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

( ದೀಪ ಚೋಳನ್ )

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ ಬೆಳಗಾವಿ